ಕರ್ನಾಟಕ ವಿಧಾನ ಸಭೆ

ದಿನಾಂಕ 22ನೇ ಗುರುವಾರ, ಮಾರ್ಚ್ 1984

ವಿಧಾನಸೌಧದಲ್ಲಿರುವ ವಿಧಾನಸಭೆಯ ಸಭಾಂಗಣದಲ್ಲಿ ಸದನವು ಬೆಳಿಗ್ಗೆ 11 ಗಂಟೆಗೆ ಸಮಾವೇಶ ಗೊಂಡಿತು.

ಮಾನ್ಯ ಅಧ್ಯಕ್ಷರು (ಶ್ರೀ ಡಿ. ಬಿ. ಚಂದ್ರೇಗೌಡ) ಪೀಠವನ್ನು ಅಲಂಕರಿಸಿದ್ದರು

ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ನೀಡಲಾದ ಬಾಯಿಮಾತಿನ ಉತ್ತರಗಳು

ವಿಷಯ:—ಬ್ಯಾಡಗಿಯಲ್ಲಿರುವ ಖಾದಿ ಗ್ರಾಮೋದ್ಯೋಗ ಕೇಂದ್ರದ ಬಗ್ಗೆ.

ಪ್ರ. 608(1591) ಡಾ॥ ಹೆಗ್ಗಪ್ಪ(ಬ್ಯಾಡಗಿ).—ಮಾನ್ಯ ಕೈಗಾರಿಕಾ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ :—

ಅ. ಬ್ಯಾಡಗಿಯಲ್ಲಿ ಒಂದು ಖಾದಿ ಗ್ರಾಮೋದ್ಯೋಗ ಕೇಂದ್ರ ಇರುವುದು ಸರಕಾರದವರ ಗಮನಕ್ಕೆ ಬಂದಿದೆಯೆ ;

ಆ. ಈಗ ಈ ಕೇಂದ್ರ ಕಾರ್ಯೋನ್ಮುಖವಾಗಿದೆಯೆ ;

ಇ. ಕಳೆದ ಒಂದು ವರ್ಷದಿಂದ ಅದು ಕಾರ್ಯಗತ ಮಾಡಿದ ಕೆಲಸಗಳೇನು ;

ಈ. ಈ ಕೇಂದ್ರದಲ್ಲಿ ಹಣ ದುರ್ವಿನಿಯೋಗ ಆಗಿರುವ ವಿಚಾರ ಸರಕಾರದ ಗಮನಕ್ಕೆ ಬಂದಿದೆಯೆ;

ಉ. ಹಾಗಿದ್ದಲ್ಲಿ ಸರಕಾರದವರು ಆ ಬಗ್ಗೆ ಕೈಕೊಂಡ ಕ್ರಮವೇನು ?

ಶ್ರೀ ಎಸ್. ಆರ್. ಬೊಮ್ಮಾಯಿ (ಮಾನ್ಯ ಕೈಗಾರಿಕಾ ಮಂತ್ರಿಗಳು) :—

ಅ. ಹೌದು. ಕರ್ನಾಟಕ ರಾಜ್ಯ ಖಾದಿ ಗ್ರಾಮೋದ್ಯೋಗ ಮಂಡಲಿಯಿಂದ ನೇರವು ಪಡೆಯುತ್ತಿರುವ ಬ್ಯಾಡಗಿ ಖಾದಿ ಗ್ರಾಮೋದ್ಯೋಗ ಸಂಘ, ಬ್ಯಾಡಗಿ, ಎಂಬ ಹೆಸರಿನ ಒಂದು ನೊಂದಾಯಿತ ಸಂಸ್ಥೆಯು ಇದೆ.

ಆ. ಹೌದು.

ಇ. ಸೆಪ್ಟೆಂಬರ್ 1983ರಲ್ಲಿ 25,000 ರೂಪಾಯಿ ದುಡಿಮೆಯ ಬಂಡವಾಳವನ್ನು ಖಾದಿ ಗ್ರಾಮೋದ್ಯೋಗ ಸಂಘಕ್ಕೆ ಖಾದಿ ಮಂಡಲಿಯು ಬಿಡುಗಡೆ ಮಾಡಿತು. ಈ ಸಂಘಕ್ಕೆ ಕರ್ನಾಟಕ ವಿದ್ಯುತ್ ಮಂಡಲಿಯು ವಿದ್ಯುಚ್ಛಕ್ತಿ ಸರಬರಾಜು ಮಾಡಿಲ್ಲ. ಆದ್ದರಿಂದ ಈ ಸಂಘಕ್ಕೆ ಈ ವರ್ಷದಲ್ಲಿ ನೂಲಿನ ಉತ್ಪಾದನೆ ಮಾಡಲಾಗಲಿಲ್ಲ. ಆದರೆ ಈ ಸಂಘವು ಈ ವರ್ಷದಲ್ಲಿ 25 ಮಹಿಳೆಯರನ್ನು ನೂಲು ತೆಗೆಯುವುದರಲ್ಲಿ ಗ್ರಾಮೀಣಾಭಿವೃದ್ಧಿ ಯೋಜನೆಯ ಅನ್ವಯ ತರಬೇತಿ ನೀಡಿದೆ, ಈ ಸಂಘವು ವಿದ್ಯುತ್ ಪೂರೈಕೆಯಾಗುತ್ತಲೆ ಉತ್ಪಾದನೆಯನ್ನು ಕೈಕೊಳ್ಳುವುದು. ಈ ದಿಶೆಯಲ್ಲಿ ಸೂಕ್ತವಾದ ಕ್ರಮ ಕೈಗೊಳ್ಳಲಾಗುತ್ತಿದೆ.

ಈ. ಇಲ್ಲ.

ಉ. ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಡಾ : ಹೆಗ್ಗಪ್ಪ.—ಮಾನ್ಯ ಅಧ್ಯಕ್ಷರೇ, ಕಳೆದ ಒಂದು ವರ್ಷದಿಂದ ಈ ಖಾದಿ ಗ್ರಾಮೋದ್ಯೋಗ ಸಂಘ ಬಾಗಿಲನ್ನೇ ತೆಗೆದಿರುವುದಿಲ್ಲ. ಮತ್ತು ಅಲ್ಲಿಗೆ ಏನು 25 ಸಾವಿರ ರೂಪಾಯಿಗಳನ್ನು ಬಿಡುಗಡೆ ಮಾಡಲಾಗಿದೆ ಆದನ್ನು ಯಾವ ಬಾಬಿಗೆ ಖರ್ಚು ಮಾಡಲಾಗಿದೆ ? ಅಲ್ಲಿಗೆ ಇನ್ನೂ ವಿದ್ಯುಚ್ಛಕ್ತಿ ಪೂರೈಕೆ ಆಗಿಲ್ಲವಾದರೂ ಈ 25 ಸಾವಿರ ರೂಪಾಯಿಗಳನ್ನು ಯಾವ ಬಾಬಿಗೆ ಖರ್ಚು ಮಾಡಲಾಗಿದೆ ? ಮತ್ತು 25 ಮಹಿಳೆಯರಿಗೆ ಪ್ರಶಿಕ್ಷಣ ಕೊಡಲಾಗಿದೆ ಎಂದು ಹೇಳುತ್ತಿದ್ದೀರಿ. ಈ ಬಗ್ಗೆ ಯಾವ ಯಾವ ಊರಿನ

ಮಹಿಳೆಯರಿಗೆ ಈ ಪ್ರಶಿಕ್ಷಣ ಕೊಡಲಾಗಿದೆ ? ಹಾಗೂ ಮಾನ್ಯಮಂತ್ರಿಗಳು ಈ ದಿಸೆಯಲ್ಲಿ ಸೂಕ್ತವಾದ ಕ್ರಮ ಕೈಗೊಳ್ಳಲಾಗುತ್ತಿದೆ ಎಂದು ಉತ್ತರ ಕೊಟ್ಟಿದ್ದಾರೆ. ಯಾವ ದಿಸೆಯಲ್ಲಿ ಸೂಕ್ತ ಕ್ರಮ ಕೈಗೊಳ್ಳಲಾಗುತ್ತಿದೆ ? ಆಲ್ಲಿಗೆ ಇನ್ನೂ ವಿದ್ಯುಚ್ಛಕ್ತಿಯನ್ನು ಪೂರೈಕೆ ಮಾಡದೇ ಇರುವುದಕ್ಕೆ ಕಾರಣ ಏನು ಎಂಬ ಬಗ್ಗೆ ಮಾನ್ಯ ಮಂತ್ರಿಗಳು ಉತ್ತರ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ಅಧ್ಯಕ್ಷರೇ, ಈ ಸಂಸ್ಥೆ 1976ರಲ್ಲಿ ನೊಂದಾಯಿಸಲ್ಪಟ್ಟಿದೆ. ಮೊದಲು ಈ ಸಂಸ್ಥೆಯವರು ಆವಲಕ್ಕಿ ತಯಾರು ಮಾಡುವುದಕ್ಕೆ 10 ಸಾವಿರ ರೂಪಾಯಿಗಳನ್ನು ಹಾಗೂ ಫೈಬರ್ ಇಂಡಸ್ಟ್ರೀಸ್‌ಗೆ 9 ಸಾವಿರ ರೂಪಾಯಿಗಳನ್ನು ಪಡೆದುಕೊಂಡಿದ್ದು. ಇದನ್ನು ಬಡ್ಡಿ ಸಮೇತ ವಾಪಸ್ ಕೊಟ್ಟಿರುತ್ತಾರೆ. ಮುಂದೆ ಖಾದಿ ಉತ್ಪಾದನೆಯ ಸಲುವಾಗಿ ಇವರಿಗೆ 1 ಲಕ್ಷ ರೂ. ಪಾಯಿಗಳನ್ನು ಕೊಡಲಾಗಿದೆ. ಇದು 1983-84ರ ಜೂನ್ ತಿಂಗಳಲ್ಲಿ ಬಿಡುಗಡೆಯಾಗಿದೆ. ಇವರು ಎನ್.ಎಂ.ಸಿ. ಮಿಷನ್ ತೆಗೆದುಕೊಂಡು ಬಂದು ಹಾಕಿದ್ದಾರೆ. ಇಲ್ಲಿಗೆ ಈ ತಿಂಗಳ ಅಂತ್ಯದೊಳಗೆ ವಿದ್ಯುಚ್ಛಕ್ತಿ ಸರಬರಾಜು ಆಗುತ್ತದೆ. ಇವರಿಗೆ ವಿದ್ಯುತ್ ಒದಗಿಸುವುದರಲ್ಲಿ ಸ್ವಲ್ಪ ತಡವಾಗಿದೆ. ಈ ತಿಂಗಳ ಅಂತ್ಯದೊಳಗೆ ವಿದ್ಯುತ್ ದೊರೆಯುವುದರಿಂದ ಕೆಲಸ ಪ್ರಾರಂಭವಾಗುತ್ತದೆ. ಮತ್ತೆ "ಸೂಕ್ತ ಕ್ರಮ" ಎಂದರೆ ಈ ಕೈಗಾರಿಕೆ ಪ್ರಾರಂಭ ಆಗುವ ದಿಸೆಯಲ್ಲಿ ತೆಗೆದುಕೊಂಡ ಕಾರ್ಯಕ್ರಮಗಳು ಎಂದು ಅರ್ಥ.

ಡಾ॥ ಹೆಗ್ಗಪ್ಪ.—ಈ ಘಟಕಕ್ಕೆ ಮೊದಲೇ ವಿದ್ಯುಚ್ಛಕ್ತಿಯನ್ನು ಪೂರೈಸಲಾಗಿದೆ. ವಿದ್ಯುಚ್ಛಕ್ತಿ ಬಿಲ್ಲು ನಾಲ್ಕೈದು ಸಾವಿರ ರೂಪಾಯಿಗಳನ್ನು ತುಂಬದೇ ಇರುವುದರಿಂದ ವಿದ್ಯುಚ್ಛಕ್ತಿ ಕಟ್ ಮಾಡಿದ್ದಾರೆ. ಅಲ್ಲಿ ವಿದ್ಯುಚ್ಛಕ್ತಿ ಇಲ್ಲದೇ ಇರುವುದರಿಂದ ಉತ್ಪಾದನೆ ಇಲ್ಲ. ಅದು ಟೋಟಲ್ ಬಂದ್ ಆಗಿದೆ. ಅಲ್ಲಿ 25 ಸಾವಿರ ರೂಪಾಯಿಗಳನ್ನು ಏತಕ್ಕೆ ಖರ್ಚು ಮಾಡಿದ್ದಾರೋ ಗೊತ್ತಿಲ್ಲ. ಅಲ್ಲಿಗೆ ತಮ್ಮ ಅಧಿಕಾರಿಗಳನ್ನು ಯಾರನ್ನಾದರೂ ಕಳುಹಿಸಿ ಅದನ್ನು ಪ್ರಾರಂಭ ಮಾಡಿಸಿ ಸರಿಯಾದಂಥ ರೀತಿಯಲ್ಲಿ ನಡೆಯುವಂತೆ ನೋಡಿಕೊಳ್ಳಬೇಕು. ಎಲೆಕ್ಟ್ರಿಸಿಟಿ ಚಾರ್ಜ್ ತುಂಬದೇ ಇರುವ ಬಗ್ಗೆ ಡಿ.ಡಿ,ಸಿ ಮೀಟಿಂಗ್ ನಲ್ಲಿ, 20 ಪಾಯಿಂಟ್ ಪ್ರೋಗ್ರಾಮ್ ಮೀಟಿಂಗ್‌ನಲ್ಲಿ ಹೇಳಿದ್ದೇನೆ. ಎಲೆಕ್ಟ್ರಿಸಿಟಿ ಬಿಲ್ ತುಂಬಿಸಿ ಅದನ್ನು ಪ್ರಾರಂಭಿಸಲಿಕ್ಕೆ ಪ್ರಯತ್ನ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ಮಾನ್ಯ ಸದಸ್ಯರು ಸರ್ಕಾರದ ಗಮನವೆನ್ನು ಈಗ ಸೆಳೆದಿದ್ದಾರೆ, ಅಲ್ಲಿಗೆ ವಿದ್ಯುಚ್ಛಕ್ತಿ ಒದಗಿಸುವ ಬಗ್ಗೆ, ಮತ್ತು ಹಣ ತುಂಬುವ ಬಗ್ಗೆ ನಮ್ಮ ಅಧಿಕಾರಿಗಳನ್ನು ಕಳುಹಿಸಿ ವ್ಯವಸ್ಥೆ ಮಾಡಿಸುತ್ತೇನೆ.

Security of Employment for Drivers working in private Institutions.

Sri Prathapchandra Shetty (Coondapur)—

609 (1679) Will the Minister for Labour and Wakf be pleased to state:—

(a) the number of Drivers of different types cf vehicles in the State (Grade-wise and District-wise particulars);

(b) whether there is any scheme before the Government to give security of employment for Drivers who are working in private Institutions;

(c) if so, the details of the said scheme ?

ಶ್ರೀ ಪ್ರತಾಪಚಂದ್ರ ಶೆಟ್ಟಿ,—ಅಧ್ಯಕ್ಷರೇ, ನಾನು 1679ನೇ ಪ್ರಶ್ನೆ ಕೇಳುವುದರ ಜೊತೆಗೆ ಅದರ ಉತ್ತರ ಬರಲಿಲ್ಲ ಎಂದು ತಿಳಿಸಲು ವಿಷಾದಿಸುತ್ತೇನೆ.

Sri Azeez sait.—Sir, there is little confusion so far as this question is concerned. The question has not reached my office. However, I will try to answer this question. There are different categories of drivers like, drivers of three-wheelers, two wheelers and other workers like the cleaners, workshop maintenance etc., are